# ಸೀತೆ ಮತ್ತು ಅಹಲ್ಯೆ ಪಾತ್ರಗಳ ಒಂದು ಮುಖಾಮುಖಿ

**ವೀಣಾ ಎನ್.**[1]
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ
ಸಂತ ಫ್ರಾನ್ಸಿಸ್ ಡಿ ಸಾಲೆಸ್ ಕಾಲೇಜು
ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು.

**ಶಾಂತರಾಜು**[2]
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ
ಸಂತ ಫ್ರಾನ್ಸಿಸ್ ಡಿ ಸಾಲೆಸ್ ಕಾಲೇಜು
ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು.

**Article Link: https://aksharasurya.com/2024/02/veena-n-shantharaju.php**

## ABSTRACT:

ಸೀತೆ ಮತ್ತು ಅಹಲ್ಯೆ ಎಂಬ ಎರಡು ಪುರಾಣ ಪಾತ್ರಗಳ ಮುಖಾಮುಖಿಯೊಂದಿಗೆ ಅಂದಿನ ಪುರುಷ ಪ್ರಧಾನ ವ್ಯವಸ್ಥೆಯಿಂದ ತಾವು ಮಾಡದ ತಪ್ಪಿಗೆ ಶಿಕ್ಷೆಯನ್ನು ಅನುಭವಿಸುವ ಸಂದರ್ಭವನ್ನು ಕಾಣಬಹುದು. ತನ್ನ ದಿವ್ಯಶಕ್ತಿಯ ಮೂಲಕ ಘೋರ ಶಾಪ ಮತ್ತು ಚಾಡಿ ಮಾತಿನಿಂದ ಘೋರ ಶಿಕ್ಷೆಯು ಇಲ್ಲಿ ದುರಂತ. ಈ ಪಾತ್ರಗಳು ಕೌಟುಂಬಿಕ ಪಾತ್ರಗಳಂತೆ ಕಂಡರೂ ಸಾಮಾಜಿಕ ಸಂದರ್ಭದಲ್ಲಿ ಒಟ್ಟು ಸ್ತ್ರೀ ಸಮುದಾಯವನ್ನು ಪ್ರತಿನಿಧಿಸುವ ಪಾತ್ರಗಳಾಗಿ ನನಗೆ ಕಾಣಿಸುತ್ತದೆ. ಪತಿಯ ಹೃದಯವನ್ನು ಪಡೆಯುವುದಲ್ಲದೆ ಸತಿಗೆ ಬೇರಾವ ಕೊರತೆ ಇರುತ್ತದೆ ಎಂದು ಸಮಾಜದ ಎಲ್ಲಾ ಪತ್ನಿಯರ ಮುಖವಾಣಿಯಂತಿದ್ದ ಸೀತೆ "ಸತಿಯ ಧ್ಯಾನ, ವ್ರತ, ತಪಸ್ಸುಗಳೇ ಪತಿಯ ರಕ್ಷೆ" ಎಂದು ನಂಬಿ ರಾಮನಿಗಾಗಿ ದಾರಿ ಕಾಯುವ ಇವಳು ಪುರಾಣದಲ್ಲಿ ಭಗ್ನ ಚಿತ್ರವಾಗಿ ಕಾಣುತ್ತಾಳೆ. ಪಾತಿವ್ರತೆಯನ್ನು ಸಾಬೀತುಪಡಿಸಿಕೊಳ್ಳಲು ಹಲವು ಆಚರಣೆಗಳು ಜಾರಿಯಲ್ಲಿದ್ದರೂ ಕಾಡಿಗೆ ಅಟ್ಟುವ ಅತೀ ಘೋರ ಶಿಕ್ಷೆ ಒಂದು ಮಾರ್ಗವೇ? ಎಂಬ ಆಲೋಚನೆಗಳು ನಮಗೆ ಮೂಡುತ್ತವೆ. ಕೆ. ಶರೀಫರು ಹೇಳುವ ಹಾಗೆ "ಹೆಣ್ಣು ಪ್ರಾರಂಭವನ್ನು ಸಹಿಸಿಕೊಳ್ಳುವ ಸಂದರ್ಭವೇ ಮುಂದಿನ ಅವಾಂತರಗಳಿಗೆ ದಾರಿ ಮಾಡಿಕೊಡುತ್ತದೆ" ಎಂಬ ಮಾತು ನಿಜಕ್ಕೂ ಸತ್ಯವಾಗಿ ಕಾಣಿಸುತ್ತದೆ. ಎರಡನೆಯದಾಗಿ ಇಂದ್ರನ ಕಾಮಕ್ಕೆ ಬಲಿಯಾಗಿ ತನ್ನ ಗಂಡನ ದಿವ್ಯ ಶಕ್ತಿಗೆ ಆಹುತಿಯಾಗಿ ಶತಮಾನಗಳ ಕಾಲ ಶಿಲೆಯಾಗಿ ನಿಂತಿದ್ದ ಅಹಲ್ಯೆಯ ಪಾತ್ರವೂ

ಕೂಡ ಶೋಚನೀಯವಾಗಿ ಕಾಣಿಸುತ್ತದೆ. ಹೆಣ್ಣಿನಲ್ಲಿ ಲೈಂಗಿಕತೆ ಎನ್ನುವುದು ಒಂದು ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಸದಾ ಸಂಶಯಕ್ಕೆ ಬಲಿಯಾಗುವ ವಸ್ತುವೇ ಎಂಬುದಕ್ಕೆ ಜ್ವಲಂತ ನಿದರ್ಶನ ಅಹಲ್ಯೆಯ ಸಂದರ್ಭದಲ್ಲಿ ಕಾಣಬಹುದು. ದಿವ್ಯದೃಷ್ಟಿ ದಿವ್ಯಶಕ್ತಿ ಎಂಬ ವರವು ಕೇವಲ ಪುರುಷರಿಗೆ ಇದ್ದಂತಹುದು ಸಂಶಯಾಸ್ಪದವಾಗಿ ಕಾಣುತ್ತದೆ. ಬ್ರಾಹ್ಮಣಶಾಹಿಗಳು ಸ್ತ್ರೀಗೆ ಇದ್ದಂತಹ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಸಲುವಾಗಿ ಇದನ್ನು ಬಳಸುತ್ತಿದ್ದರೆ, ಹೆಣ್ಣಿಗೆ ಮಾತ್ರ ದಿವ್ಯಶಕ್ತಿ ಯಾಕೆ ಇರಲಿಲ್ಲ? ಒಂದು ವೇಳೆ ಇದ್ದಿದ್ದರೆ ಕಾಮರೂಪಿಯಾದ ಇಂದ್ರನನ್ನು ತಡೆದು ಶತಮಾನಗಳ ಕಾಲ ಕಲ್ಲಾಗುವ ಬದಲು ಸುಂದರ ಹೂವಾಗಿ ಜೀವನ ನಡೆಸಬಹುದಿತ್ತಲ್ಲವೇ? ಎಂಬಂತಹ ಪ್ರಶ್ನೆಗಳನ್ನು ಇಲ್ಲಿ ಚರ್ಚಿಸಲಾಗಿದೆ. ಮಲ್ಲಿಕಾ ಘಂಟಿ ಅವರ 'ಸ್ವರ್ಗದಲ್ಲೊಂದು ಸಂದರ್ಶನ' ಎಂಬ ಕವಿತೆಯಲ್ಲಿ ಅಹಲ್ಯೆಯನ್ನು ಸಂದರ್ಶಿಸುವ, ಆಧುನಿಕ ಕಾಲಘಟ್ಟದಲ್ಲಿ ಅಹಲ್ಯೆಯನ್ನು ನೋಡುವ ರೀತಿ-ನೀತಿಗಳನ್ನು ತಿಳಿದುಕೊಳ್ಳಬಹುದು.

**KEY WORDS:**

ಸಮಾಜವಾದ, ಲಿಂಗ ತಾರತಮ್ಯ, ಸ್ತ್ರೀ ಶೋಷಣೆ, ಪತಿ ಭಕ್ತಿಯ ಅತಿರೇಕ, ಕುಟುಂಬ, ಸ್ತ್ರೀ, ವೈಚಾರಿಕತೆ, ದೃಷ್ಟಿಕೋನ.

'ಪುರಾಣ ಮತ್ತು ಇತಿಹಾಸ' ಸ್ವತಂತ್ರ ಪ್ರಜ್ಞೆಗಳನ್ನು ಕೊಟ್ಟರೂ ಕೂಡ, ಪುರಾಣ ಚರಿತ್ರೆಯಲ್ಲ ಚರಿತ್ರೆ ಪುರಾಣವಲ್ಲ. ಪುರಾಣ ಎನ್ನುವುದು ಜನಸಮುದಾಯದ ಮೂಲಕ ಹುಟ್ಟುವ ಒಂದು ಕಥನವಾದರೆ, ಚರಿತ್ರೆಯು ಜನಸಮುದಾಯದ ಒಳಗೊಳ್ಳುವಿಕೆಯ ಮೂಲಕ ಘಟಿಸಿದ ಒಂದು ಘಟನೆಯಾಗಿದೆ. ಹಾಗಾಗಿ ಪುರಾಣದಲ್ಲಿ ಚರಿತ್ರೆಯ ಕೆಲವು ಅಂಶಗಳು ಸೇರ್ಪಡೆಯಾಗುತ್ತದೆ. ಈ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯವು ರೂಪುಗೊಂಡಿದೆ.

ಭಾರತೀಯ ಸಾಹಿತ್ಯದಲ್ಲಿ ಚರಿತ್ರೆಗಿಂತಲೂ ಮುಖ್ಯವಾಗಿ ಪುರಾಣವನ್ನೇ ಆಧರಿಸಿದ ಕೃತಿಗಳನ್ನು ರಚಿಸಲಾಗಿದೆ. ಚರಿತ್ರೆಗಿಂತಲೂ ಭಾರತೀಯರ ಮನಸ್ಸಿನಲ್ಲಿ ಪುರಾಣ ಹೆಚ್ಚಾಗಿ ಬೇರೂರಿರುವುದರಿಂದ, ಇಂತಹ ಪುರಾಣವನ್ನು ಕಿತ್ತು ಹಾಕುವ ಬದಲು ಅದನ್ನ ಮಾರ್ಪಾಡುಗೊಳಿಸಿರುವುದು ತಿಳಿದಂತಹ ವಿಚಾರವೇ.

ಮೂಲ ಮಹಾಭಾರತ, ಮೂಲ ರಾಮಾಯಣ, ಹಾಗೂ ಮೂಲಕಾವ್ಯಗಳಲ್ಲಿನ ಕೆಲವೊಂದು ಪಾತ್ರಗಳನ್ನು ಉದಾತ್ತೀಕರಿಸಿ, ಮಾನವ-ಮಹಾಮಾನವನನ್ನಾಗಿ ಚಿತ್ರಿಸುವ ಪರಂಪರೆ ಜೈನ ಕವಿಗಳಾದ ಪಂಪ, ರನ್ನ, ನಾಗಚಂದ್ರ ಮುಂತಾದವರಿಂದ ಹಿಡಿದು ಇಂದಿನ ಆಧುನಿಕ ಸಾಹಿತ್ಯದ ಕವಿಗಳವರೆಗೂ, ಬೆಳೆದು ಬಂದಿರುವಂತಹದು.

ಆ ಮೂಲಕ ಹೊಸ ಆಲೋಚನಾ ಕ್ರಮಗಳನ್ನು ಕೈಗೊಂಡಿರುವಂತಹದ್ದು ಸಂತಸದ ವಿಚಾರವಾಗಿದೆ. ರಾಮಾಯಣವನ್ನು ಸಾಂಪ್ರದಾಯಿಕ ಹಿಂದೂ ಧರ್ಮವು ತನ್ನ ಪ್ರಮಾಣ ಗ್ರಂಥವೆಂದು ಭಾವಿಸುತ್ತದೆ. ಇದರಲ್ಲಿ ಭಗವಂತನಾದ ವಿಷ್ಣುವಿನ ಒಂದು ಅವತಾರ ರಾಮನೆಂದು ಪ್ರತಿಪಾದಿಸಿದ್ದು, "ದುಷ್ಟ ಶಿಕ್ಷಣ, ಶಿಷ್ಟ ರಕ್ಷಣೆಯ" ಅರ್ಥವನ್ನು, ತಲೆತಲಾಂತರದಿಂದಲೂ ಭಾರತೀಯರು ಗ್ರಹಿಸುತ್ತಾ ಬಂದಿದ್ದಾರೆ. ಇದಕ್ಕೆ ಧಕ್ಕೆ ತರುವುದು ನನ್ನ ಉದ್ದೇಶವಲ್ಲ. ನಾನು ಕಂಡ ನನ್ನ ಆಲೋಚನಾ ಪ್ರಕ್ರಿಯೆಯಲ್ಲಿ ಹುಟ್ಟಿದ ಒಂದೆರಡು ಪ್ರಶ್ನೆಗಳನ್ನು ಚರ್ಚಿಸುವುದಷ್ಟೇ ನನ್ನ ಲೇಖನದ ಉದ್ದೇಶ. ಈ ನಿಟ್ಟಿನಲ್ಲಿ ನಾನು 'ಸೀತೆ ಮತ್ತು ಅಹಲ್ಯೆ' ಎಂಬ ಎರಡು ಪುರಾಣ ಪಾತ್ರಗಳನ್ನು ಮುಖಾಮುಖಿ ಮಾಡಲು ಹೊರಟಿದ್ದೇನೆ. ಕಾರಣ ತನ್ನ ದಿವ್ಯ ಶಕ್ತಿಯ ಮೂಲಕ ಅಹಲ್ಯೆಗೆ ಘೋರ ಶಾಪ, ಮತ್ತು ಚಾಡಿ ಮಾತಿನಿಂದ ಸೀತೆಗೆ ಘೋರ ಶಿಕ್ಷೆ–ಇಬ್ಬರೂ, ಹೆಂಡತಿಯರ ಮೇಲೆ ಅನುಮಾನ ಪಟ್ಟವರೇ ಆಗಿದ್ದಾರೆ. ಈ ಎರಡು ಪಾತ್ರಗಳ ಕೆಲವು ಪ್ರಾತಿನಿಧಿಕ ವಿಚಾರಗಳನಷ್ಟೇ ಇಲ್ಲಿ ಹಂಚಿಕೊಳ್ಳಲು ಬಯಸುತ್ತೇನೆ. ಅಂದರೆ, ಸೀತೆ ಮತ್ತು ಅಹಲ್ಯೆಯ ದಾಂಪತ್ಯ ನೆಲೆ ಅಥವಾ ಕೌಟುಂಬಿಕ ನೆಲೆಯಲ್ಲಿ, ಸೀತೆಯನ್ನು ರಾಮನ ಮೂಲಕ, ಅಹಲ್ಯೆಯನ್ನು ಗೌತಮನ ಮೂಲಕ ನೋಡಲು ಹೊರಟಂತಹ ಸಂದರ್ಭದಲ್ಲಿ, ಸೀತೆ ಮತ್ತು ಅಹಲ್ಯೆ ಅತೀ ಶೋಷಣೆಗೆ ಒಳಗಾದಂತಹ ಪಾತ್ರಗಳಾಗಿ ಕಾಣಿಸುತ್ತಾರೆ. ಇವು ಕೌಟುಂಬಿಕ ಪಾತ್ರಗಳಂತೆ ಕಂಡರೂ, ಸಾಮಾಜಿಕ ಸಂದರ್ಭದಲ್ಲಿ ಒಟ್ಟು ಸ್ತ್ರೀ ಸಮುದಾಯವನ್ನು ಪ್ರತಿನಿಧಿಸುವ ಪಾತ್ರಗಳಾಗಿ ನನಗೆ ಕಾಣಿಸುತ್ತವೆ.

ಮೊದಲಿಗೆ ಸೀತೆಯನ್ನು ಕುರಿತು ನಾನು ಕಂಡ ಕೆಲವು ವಿಚಾರಗಳನ್ನು ಚರ್ಚಿಸುವುದಾದರೆ ಪಾತಿವ್ರತ್ಯಕ್ಕೆ ತವರೂರು, ಪತಿವ್ರತಾ ಶಿರೋಮಣಿ ಎಂದು ಹೆಸರಿಸಲ್ಪಟ್ಟ ಸೀತೆಯು, ಪುರಾಣದಲ್ಲಿ ಅದ್ಭುತ ಶಕ್ತಿಯಾಗಿ ಕಂಡರೂ, ರಾಮನ ಎಲ್ಲಾ ಕಷ್ಟ–ಕಾರ್ಪಣ್ಯದ ಶೋಚನೀಯ ಸಂದರ್ಭದಲ್ಲಿ, ಹೆಜ್ಜೆ–ಹೆಜ್ಜೆಗೂ ಮುಳ್ಳಿನ ದಾರಿಯಲ್ಲಿ ನಡೆದು ಕಷ್ಟವನ್ನರಿಸಿ ಮಾತ್ರ ಬಂದ ಪಾತ್ರವಾಗಿ ಕಾಣುತ್ತಾಳೆ. ಅರಮನೆಯ ವೈಭೋಗ ಸುಖವನ್ನಷ್ಟೇ ಬಯಸಿ ಬಂದಿದ್ದರೆ, ವನವಾಸದ ಸಂದರ್ಭದಲ್ಲಿ ಅರಮನೆಯಲ್ಲೇ ಉಳಿದುಕೊಳ್ಳಬಹುದಿತ್ತು. ತನ್ನ ಇಡೀ ಬದುಕನ್ನು ರಾಮನೊಂದಿಗೆ ನಿಶ್ಚಯಿಸಿಕೊಂಡವಳಾದ್ದರಿಂದ, ಎಲ್ಲಾ ಕಷ್ಟಗಳಲ್ಲೂ ಸಮಪಾಲಾಗಿ ಭಾಗಿಯಾಗಿ, ರಾಮನ ಶ್ರೇಯಸ್ಸನ್ನು ಬಯಸುವ ಮಡದಿಯಾಗಿ, ಸ್ವಲ್ಪವೂ ಯೋಚಿಸದೆ ರಾಮನ ಹಿಂದೆ ಕಾಡಿಗೆ ಬರುತ್ತಾಳೆ. ಆದರೆ ಬಹುಮಾನವಾಗಿ ರಾಮ ಸೀತೆಗೆ ನೀಡಿದ್ದಾದರೂ ಏನು? ತನ್ನ ಮಡದಿಯನ್ನು ಮಡದಿಯಾಗಿ ನೋಡದೆ, ಸಾಮಾನ್ಯ ಪ್ರಜೆಯಾಗಿ ನೋಡಿದ್ದರಿಂದಲೇ ಅಗಸನ ಮಾತು ಅವನಿಗೆ

ಮುಖ್ಯವಾಯಿತೇನೋ? ರಾಜನಾಗಿ ತೀರ್ಮಾನ ಕೈಗೊಳ್ಳುವ ಮುಂಚೆ, ಗಂಡನಾಗಿ ಸೀತೆಯ ಮನಃಸ್ಥಿತಿಯನ್ನು ಅರಿಯಬೇಕಾದದ್ದು ಅವನ ಕರ್ತವ್ಯವಾಗಿತ್ತು. ಸೀತೆಯನ್ನು ತನ್ನ ದೇವತೆಯಾಗಿ, ಪ್ರೇಮದ ಸಾಕಾರಮೂರ್ತಿಯಾಗಿ, ಪ್ರೀತಿಯ ಪ್ರಣಯಿನಿಯಾಗಿ, ಶಕ್ತಿಪ್ರದಾಯಿನಿಯಾಗಿ ಕಾಣಬೇಕಾಗಿದ್ದ ರಾಮನಿಗೆ, ಸೀತೆ ಕೇವಲ ಪ್ರಜೆಯಾಗಿದ್ದಳೇ? ರಾಜಧರ್ಮವೇ ಅವನಿಗೆ ಮುಖ್ಯವಾಗಿತ್ತೇ? ಎಂಬ ಪ್ರಶ್ನೆಗಳು ನನ್ನನ್ನು ಕಾಡುತ್ತಿವೆ.

'ಯಾವ ಗಂಡ, ಹೆಂಡತಿಯ ದುಃಖವನ್ನು ಹೋಗಲಾಡಿಸಬೇಕೋ, ಅವನೇ ಅವಳ ದುಃಖದ ಮೂಲವಾದರೆ', ಅದಕ್ಕೆ ನಿವಾರಣೆ ಎಲ್ಲಿ ಸಿಗುತ್ತದೆ. "ಪತಿಯ ಹೃದಯವನ್ನು ಪಡೆಯುವುದಲ್ಲದೆ ಸತಿಗೆ ಬೇರಾವ ಕೊರತೆ ಇರುತ್ತದೆ" ಎಂದು ಸಮಾಜದ ಎಲ್ಲಾ ಪತ್ನಿಯರ ಮುಖವಾಣಿಯಂತಿದ್ದ ಸೀತೆ ಇದೀಗ ಗೊಂದಲಮಯವಾಗಿ ಕಾಣುತ್ತಾಳೆ. ಸೀತೆಯನ್ನು ತಂದು ರಾವಣನು ತನ್ನ ಅರಮನೆಯಲ್ಲಿಟ್ಟರೂ, ಅರಸೊತ್ತಿಗೆಯ ಸುಖ-ಭೋಗಗಳಿಗೆ ಹೊರತಾದ ಗುಡಿಸಿಲಿನಲ್ಲಿ ತಾಪಸಿಯಾಗಿ ರಾಮಧ್ಯಾನ ವ್ರತತೊಟ್ಟು, ಅವನು ಬಂದು ಬಿಡಿಸಿಕೊಂಡು ಹೋಗುವವರೆಗೂ ಉಸಿರು ಹಿಡಿಯುವ ದಾರಿ ಆರಿಸಿಕೊಳ್ಳುತ್ತಾಳೆ. ಆ ಮೂಲಕ "ಸತಿಯ ಧ್ಯಾನ, ವ್ರತ, ತಪಸ್ಸುಗಳೇ ಪತಿಯ ರಕ್ಷೆ" ಎಂದು ನಂಬಿದ್ದ ಸೀತೆಯ ಭಗ್ನ ಚಿತ್ರಗಳು ಎಂತಹವರನ್ನು ಯೋಚನೆಗೀಡು ಮಾಡುತ್ತದೆ. ಇಷ್ಟಕ್ಕೂ ಸೀತೆ ತಪ್ಪು ಮಾಡಿದ್ದಾಳೆ ಎಂದು ತಿಳಿಸಲು ಯಾವ ಆಧಾರವು ಇಲ್ಲದಿದ್ದರೂ, ಇದು ಕೇವಲ ಅನುಮಾನವಷ್ಟೇ ಆಗಿದ್ದರೂ, ಆ ಅನುಮಾನಕ್ಕಾಗಿ ಕಾಡಿಗೆ ಅಟ್ಟುವುದು ಒಂದು ಮಾರ್ಗವೇ? ಎಂಬುದು ಗಮನೀಯ. ಏಕೆಂದರೆ ಪೂರ್ವದಲ್ಲಿ ತಮ್ಮ ಪಾತಿವ್ರತೆಯನ್ನು ಸಾಬೀತುಪಡಿಸಿಕೊಳ್ಳಲು ಹಲವು ಆಚರಣೆಗಳು ಜಾರಿಯಲ್ಲಿದ್ದವು. ಉದಾಹರಣೆ: ಹುತ್ತದೊಳಗಿನ ಸರ್ಪವನ್ನು ಕೈಯಿಂದ ಹೊರಗೆ ತೆಗೆಯುವುದು, ಅಥವಾ ಸುಡುವ ಕೆಂಡವನ್ನು ಕೈಯಲ್ಲಿ ಹಿಡಿದು ತಮ್ಮ ಪತಿವ್ರತಾ ಧರ್ಮವನ್ನು ನಿರೂಪಿಸಿಕೊಳ್ಳುತ್ತಿದ್ದರು. ಇಷ್ಟೆಲ್ಲಾ ಮಾರ್ಗಗಳಿದ್ದರೂ ರಾಮ ಕಾಡಿಗೆ ಅಟ್ಟುವ, ಅತಿಘೋರ ಮಾರ್ಗವನ್ನೇ ಏಕೆ ಆಯ್ಕೆ ಮಾಡಿಕೊಂಡ ಎಂಬುದು ಕೂಡ ಮುಖ್ಯವೆನಿಸುತ್ತದೆ.

ಕೆ. ಷರೀಫರು 'ಪ್ರಶ್ನಿಸಲಿಲ್ಲವೇಕೆ?' ಎಂಬ ಕವನದಲ್ಲಿ "ಹೆಣ್ಣು ಪ್ರಾರಂಭವನ್ನು ಸಹಿಸಿಕೊಳ್ಳುವ ಸಂದರ್ಭವೇ ಮುಂದಿನ ಅವಾಂತರಗಳಿಗೆ ಹೇಗೆ ದಾರಿ ಮಾಡಿಕೊಡುತ್ತದೆ" ಎಂಬುದನ್ನು ಈ ಕವಿತೆಯ ಮೂಲಕ ತಿಳಿಯಬಹುದು. ಇತಿಹಾಸದ ಪುಟಗಳನ್ನು ನೋಡಿದರೆ ಕೇವಲ ನಿಮ್ಮ ಗಂಡಂದಿರ ಹೆಸರುಗಳೇ ಪ್ರಜ್ವಲಿಸುತ್ತಿದೆ, ಅವರ ಜನಪ್ರಿಯವಾದ ಹೆಸರುಗಳ ಹಿಂದೆ ನಿಮ್ಮ ಜ್ವಲಂತ

ಮಯವಾದ ತ್ಯಾಗ, ಸಹನೆ, ಪ್ರೀತಿಗಳೆಲ್ಲವೂ ಕೇವಲ ಗೌಣವಾಗಿ ಕಾಣಿಸುತ್ತಿದೆ ಎನ್ನುತ್ತಾರೆ. ಹೌದು ನಿಜವಾಗಿಯೂ ನನಗೀಗ ಒಂದು ಪ್ರಶ್ನೆ ಕಾಡುತ್ತಿದೆ. ಇಡೀ ರಾಮಾಯಣವನ್ನು ನಾವು ಅವಲೋಕಿಸಿದಾಗ, ರಾಮನಿಗಿಂತ ಪ್ರತಿಹಂತದಲ್ಲೂ ಸೀತೆಯ ಪಾತ್ರ ಪ್ರಧಾನವಾಗಿ ಕಂಡರೂ, ಏಳು–ಬೀಳಿನ ದಾರಿಯಲ್ಲಿ ಕಷ್ಟವನ್ನು ಉಂಡ ಕಥಾನಾಯಕಿಯಾಗಿ ಕಂಡರೂ, 'ರಾಮಾಯಣ' ಎಂಬ ಶೀರ್ಷಿಕೆಯನ್ನೇ ಏಕೆ ಗೊತ್ತುಮಾಡಿದರು. ' 'ಸೀತಾಯಣ' ಎಂಬ ಹೆಸರು ಏಕೆ ಆಗಬಾರದಿತ್ತು. ಬಹುಶಃ ಪುರುಷ ಪ್ರಧಾನ ವ್ಯವಸ್ಥೆಗಳು ಭಾರತದಲ್ಲಿ ಗಂಡನ್ನೇ ಪ್ರಧಾನವಾಗಿ ಇಟ್ಟುಕೊಂಡಿದ್ದರಿಂದ, ಧರ್ಮಶಾಸ್ತ್ರಗಳಲ್ಲೂ, ಸಮಾಜದಲ್ಲೂ, ಇತಿಹಾಸದಲ್ಲೂ, ಗಂಡೇ ಪ್ರಧಾನ ಪಾತ್ರವಾಗಿ ಬೆಳೆದು, ಹೆಣ್ಣು ತುಳಿತಕ್ಕೆ ಒಳಗಾಗಿರಬಹುದು. ಹೀಗೆ ಮುಂದುವರೆದು ನೋಡಿದಾಗ, 'ಶ್ರೀ ರಾಮಾಯಣ ದರ್ಶನಂ'ನಲ್ಲಿ ಕುವೆಂಪುರವರ ಪ್ರತಿಭೆ ಹಾಗೂ ಹೆಣ್ಣಿನ ಸ್ಥಾನಮಾನ ಆಕೆಗೆ ನೀಡಿದ ವಿಶೇಷ ಗೌರವ, ಮನ್ನಣೆಯನ್ನು ಕಾಣಬಹುದು. ಮೂಲ ರಾಮಾಯಣದಲ್ಲಿ ಅಗ್ನಿಪ್ರವೇಶ ಸಂದರ್ಭದಲ್ಲಿ ಸೀತೆ ಅಗ್ನಿಕುಂಡ ರಚಿಸಿ, ಆ ಭಯಂಕರ ಅಗ್ನಿಕುಂಡಕ್ಕೆ ಬೀಳುತ್ತಾಳೆ. ಸ್ವಲ್ಪ ಹೊತ್ತಿನಲ್ಲೇ 'ಮುಡಿದ ಹೆರಳು ಬಾಡದಂತೆ' ಅಗ್ನಿದೇವ ಅವಳನ್ನು ಎತ್ತಿಕೊಂಡು ಪ್ರತ್ಯಕ್ಷನಾಗುತ್ತಾನೆ. ಆದರೆ ಕುವೆಂಪುರವರ ಕಾವ್ಯದಲ್ಲಿ ಅಗ್ನಿಪ್ರವೇಶದ ಸಂದರ್ಭ 'ಕಾವ್ಯದ ಭವ್ಯ ದರ್ಶನ'ವೆಂದರೆ ತಪ್ಪಾಗಲಾರದು. ಸೀತೆ ಅಗ್ನಿಕುಂಡಕ್ಕೆ ಬಿದ್ದ ತಕ್ಷಣ ಸಿಂಹಾಸನದಿಂದೆದ್ದ ರಾಘವ ಮುಂದೆ ಬಂದು ಅಗ್ನಿಕುಂಡಕ್ಕೆ ಬೀಳುತ್ತಾನೆ. ಸ್ವಲ್ಪಹೊತ್ತಿನಲ್ಲೇ ಸೀತೆಯ ಕೈಹಿಡಿದು ಅಗ್ನಿಸ್ಥಳದಿಂದ ಮೇಲೆದ್ದು ಬರುತ್ತಾನೆ. ಈ ನಿಟ್ಟಿನಲ್ಲಿ ಕುವೆಂಪು ತಳೆದಿದ್ದ ಹೆಣ್ಣಿನ ಧೋರಣೆಗಳು, ಶೀಲವೆಂಬುದು ಕೇವಲ ಹೆಣ್ಣಿಗೆ ಸೀಮಿತವಲ್ಲ ಗಂಡಿಗೂ ಅದು ಅನ್ವಯಿಸುತ್ತದೆ ಎಂಬ ಮಹಾನ್ ಸಂದೇಶವನ್ನು ಸಾರುತ್ತಾರೆ.

ಇನ್ನು ಎರಡನೆಯದಾಗಿ, ಇಂದ್ರನ ಕಾಮಕ್ಕೆ ಬಲಿಯಾಗಿ ತನ್ನ ಗಂಡನ ದಿವ್ಯಶಕ್ತಿಗೆ ಆಹುತಿಯಾಗಿ, ಶತಮಾನಗಳ ಕಾಲ ಶಿಲೆಯಾಗಿ ನಿಂತಿದ್ದ ಅಹಲ್ಯೆಯ ಪಾತ್ರವು ಶೋಚನೀಯವಾಗಿ ಕಾಣಿಸುತ್ತದೆ. ಹೆಣ್ಣಿನ ಲೈಂಗಿಕತೆ ಎನ್ನುವುದು ಒಂದು ಪುರುಷಪ್ರಧಾನ ವ್ಯವಸ್ಥೆಯಲ್ಲಿ ಸದಾ ಸಂಶಯಕ್ಕೆ ಬಲಿಯಾಗುವ ವಸ್ತುವೇ ಎಂಬುದಕ್ಕೆ ಜ್ವಲಂತ ನಿದರ್ಶನ ಅಹಲ್ಯೆಯ ಸಂದರ್ಭದಲ್ಲಿ ಕಾಣಬಹುದು. ತಾನು ಮಾಡದ ತಪ್ಪಿಗೆ, ಇಂದ್ರನ ಮೋಸದ ಜಾಲಕ್ಕೆ ಸಿಲುಕಿ, ಬ್ರಾಹ್ಮಣಶಾಹಿ ನೆಲೆಯಲ್ಲಿ ದಿವ್ಯ ಶಕ್ತಿ ಅಥವಾ ದಿವ್ಯಜ್ಞಾನ ಎಂಬ ವರಕ್ಕೆ ಹೇಗೆ ಬಲಿಯಾಗಿ ತನ್ನ ಇಡೀ ಬದುಕನ್ನು ಸವೆಯುತ್ತಾಳೆ ಎಂಬುದನ್ನು ಕಾಣಬಹುದು. ಹಾಗಾದರೆ ಏನಿದು ದಿವ್ಯಜ್ಞಾನ? ಕೇವಲ ಗಂಡು ಶಿರೋಮಣಿಗಳಿಗೆ ಮಾತ್ರ ಹೇಗೆ ಈ ದಿವ್ಯಜ್ಞಾನದ

ಪ್ರಾಪ್ತಿ ಲಭಿಸಿತ್ತು. ಹೆಂಡತಿಯರ ಶೀಲವನ್ನು ದಿವ್ಯ ಶಕ್ತಿಯ ಮೂಲಕ ಅವಲೋಕನ ಮಾಡಿ ತಮ್ಮ ಹಿಡಿತದಲ್ಲಿಟ್ಟುಕೊಳ್ಳಲು ಪುರುಷರು ಬಳಸುತ್ತಿದ್ದ ಒಂದು ಅಸ್ತ್ರವಾಗಿ–ತ್ತೆ? ಪುರಾಣಗಳಲ್ಲಿ ಪುರುಷನಿಗೆ ಇದ್ದಂತಹ ದಿವ್ಯಶಕ್ತಿ ಮಹಿಳೆಗೆ ಏಕೆ ಇರಲಿಲ್ಲ? ಬ್ರಾಹ್ಮಣಶಾಹಿಗಳು ಸ್ತ್ರೀಗೆ ಇದ್ದಂತಹ ಸ್ವಾತಂತ್ರವನ್ನು ಹತ್ತಿಕ್ಕುವ ಸಲುವಾಗಿ ಇದನ್ನು ಬಳಸುತ್ತಿದ್ದರೆ? ಒಂದು ವೇಳೆ ಇದೇ ದಿವ್ಯಶಕ್ತಿ ಅಂದು ಅಹಲ್ಯೆಗೆ ಇದ್ದಿದ್ದರೆ, ಬಂದಿರುವುದು ಗೌತಮನಲ್ಲ ಕಾಮರೂಪಿಯಾದ ಇಂದ್ರನು ಎಂಬುದು ಅವಳ ಗಮನಕ್ಕೆ ಬಾರದೆ ಇರದಿದ್ದಿತೇ? ಗೌತಮನ ಶಾಪಕ್ಕೆ ಬಲಿಯಾಗಿ ಶತಮಾನಗಳ ಕಾಲ ಜಡ ರೂಪಿನ ನಿಷ್ಠುರ ಕಲ್ಲಾಗಿ ನಿಲ್ಲುವ ಪರಿಸ್ಥಿತಿ ಒದಗುತ್ತಿತ್ತೇ? ಎಂಬುದು ಗಮನಿಸಲೇಬೇಕಾದ ಮುಖ್ಯ ಅಂಶಗಳಾಗಿವೆ. ಪೂರ್ವದಲ್ಲಿ ಋಷಿಗಳು ಪ್ರಖರ ಪಂಡಿತರಾಗಿರುತ್ತಿದ್ದರು. ಆದರೆ ಅವರ ಹೆಂಡತಿಯರು ಮಾತ್ರ ಸಾಮಾನ್ಯ ಮಹಿಳೆಯರಾಗಿದ್ದರು. ತಮ್ಮ ಪತಿವ್ರತಾ ಧರ್ಮವನ್ನು ಉಳಿಸಿಕೊಂಡು ಕಾಪಾಡಿಕೊಂಡು ಬರುವುದೇ ಒಂದು ಶಕ್ತಿ ಅಥವಾ ವ್ರತವಾಗಿರುತಿತ್ತು. ಈ ನಿಟ್ಟಿನಲ್ಲಿ ಅಹಲ್ಯೆಯನ್ನು ನೋಡಿದಾಗ ಅವಳ ತಪ್ಪು ಏನಿಲ್ಲವಾದರೂ, ಒಂದು ಸಾಮಾನ್ಯ ಮಹಿಳೆಯಾಗಿ ದಮನಕ್ಕೆ ಒಳಗಾಗುತ್ತಾಳೆ. ಒಂದು ವೇಳೆ ಅಹಲ್ಯೆಯು ತನ್ನ ಗಂಡ ಶಿರೋಮಣಿ ಶಾಪವಿತ್ತ ಸಂದರ್ಭದಲ್ಲಿ, ಮೂಕವಿಸ್ಮಿತಳಾಗಿ ಮೌನದ ಕಡಲಲ್ಲಿ ಕೊಚ್ಚಿ ಹೋಗುವ ಬದಲು, ಶಾಪಕ್ಕೆ ಪ್ರತ್ಯುತ್ತರವಾಗಿ ಕ್ರಾಂತಿಯ ಕಿಡಿ ಎಸೆದಿದ್ದರೆ, ಪ್ರಶ್ನೆಯ ಸುರಿಮಳೆಯಿಂದ ಗೌತಮನನ್ನು ತೊಯ್ದಿದ್ದರೆ, ಅವನ ಅಂತರಾಳದಲ್ಲಿ ಧಗಧಗ ಉರಿಯುತ್ತಿದ್ದ ಅನುಮಾನದ ಕಿಡಿಗಳು ಆರಿ ಹೋಗಿ ಅವಳ ಬದುಕಿನ ತಿರುವುಗಳು ಬೇರೆಯದ್ದಾಗೇ ಉಳಿಯುತ್ತಿತ್ತೇನೋ ಅನಿಸುತ್ತದೆ.

ಕುವೆಂಪುರವರ ಮಹಾಕಾವ್ಯದಲ್ಲಿ ಸುತ್ತಲೂ ಬಿದಿರು ಬೆಳೆದಿದ್ದ ಗೆದ್ದಲಿನ ಹುತ್ತವು ಹತ್ತಿದ್ದ, ಪಾಚಿಯಿಂದ ಆವರಿಸಿದ, ಒಂದು ಬಂಡೆಯಾಗಿ ಬಿದ್ದಿದ್ದ ಶಾಪಗ್ರಸ್ತ ಅಹಲ್ಯೆಯಲ್ಲಿ ರಾಮನು, ತಾಯಿ ಹೃದಯದ ಆಕ್ರಂದನ ಕೇಳಿ, ಆಕೆಯನ್ನು ಮನುಷ್ಯಳನ್ನಾಗಿ ಪಾವನೀಕರಿಸಿ, ‘ನೀನು ತಪ್ಪು ಮಾಡಿಲ್ಲ ತಾಯಿ’ ಎಂದು ರಾಮನ ಮುಖಾಂತರ ಅಹಲ್ಯೆಯ ತಪ್ಪಿಲ್ಲ ಎಂದು ಹೇಳಿಸುವ ಕುವೆಂಪುರವರ ಸ್ತ್ರೀಪರ ಕಾಳಜಿ, ಹಾಗೂ ಸ್ತ್ರೀ ಮನ್ನಣೆಯೂ ಪ್ರಿಯವೆನಿಸುತ್ತದೆ.

ಇನ್ನು ಮಲ್ಲಿಕಾ ಘಂಟಿ ಅವರು ‘ಸ್ವರ್ಗದಲ್ಲೊಂದು ಸಂದರ್ಶನ’ ಎಂಬ ಕವಿತೆಯಲ್ಲಿ ಅಹಲ್ಯೆಯನ್ನು ಸಂದರ್ಶಿಸುವ ಆಧುನಿಕ ಕಾಲಘಟ್ಟದಲ್ಲಿ ಅಹಲ್ಯೆಯನ್ನು ನೋಡುತ್ತಿರುವ ರೀತಿ–ನೀತಿಗಳು ಮುಖ್ಯವೆನಿಸುತ್ತದೆ. ಅಹಲ್ಯೆಯ ಅಂತರಾಳದ ಮಾತುಗಳನ್ನು ಆಡಿಸುವ ಮಲ್ಲಿಕಾಘಂಟಿ ಆಧುನಿಕ ಸಮಾಜಕ್ಕೆ ಅಹಲ್ಯೆಯ ಮೂಲಕ ಉತ್ತರವನ್ನು ನೀಡುತ್ತಾರೆ. ಬಹಳಷ್ಟು ಲಲನೆಯರು ನಿನ್ನ

ಬಗ್ಗೆ ಕವಿತೆ ಕಾವ್ಯ ಬರೆದಿದ್ದಾರಂತಲ್ಲಾ ಎಂದಾಗ, ಅಹಲ್ಯೆಯು ಹೌದು ನನ್ನ ಮೇಲೆ ಕರುಣೆ ತೋರಿಸಿ ಮಾತ್ರ ಬರೆಯುತ್ತಿದ್ದಾರೆ. ಆದರೆ ಬರೆಯುತ್ತಿರುವವರು ಮಾತ್ರ ಬದಲಾಗುತ್ತಿಲ್ಲ, ಸಮಾಜವನ್ನು ಬದಲಾಯಿಸುತ್ತಿಲ್ಲ ಎಂದು ಹೇಳುವ ಮೂಲಕ ನೋಡುವವರ ದೃಷ್ಟಿಕೋನವು ಬದಲಾಗಬೇಕು ಎಂದಿದ್ದಾಳೆ.

ಏನೇ ಆಗಲಿ ಪಿತೃಪ್ರಧಾನ ವ್ಯವಸ್ಥೆ ಲಕ್ಷ್ಮಣನ ಮೂಲಕ ಸೀತೆಗೆ ಹಾಕಿದ ನಿರ್ಬಂಧದ ಗೆರೆ, ಈ ವ್ಯವಸ್ಥೆಯು ಸಮಾಜದ ಜನಪ್ರಿಯ ಅಂಶವಾಗಿ ಬೆಳೆದು, ಇಂದಿಗೂ ಗಂಡಸರಿಗಿಂತ ಹೆಚ್ಚಾಗಿ ಮಹಿಳೆಯರಿಗೆ ಪ್ರಿಯವಾಗಿ ಅನ್ವಯಿಸುತ್ತಿರುವುದು ವಿಷಾದಕರ ಸಂಗತಿಯಾಗಿದೆ.

**ಪರಾಮರ್ಶನ ಗ್ರಂಥಗಳು:**

1. ಚಂದ್ರಶೇಖರ್ ಟಿ. ಆರ್. & ನಾಗಭೂಷಣ ಸ್ವಾಮಿ ಓ. ಎಲ್. (ಸಂ). (2016). ಮಹಿಳಾ ಅಧ್ಯಯನ ಪರಿಭಾಷೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರ. ಬೆಂಗಳೂರು.
2. ದಂಡಪ್ಪ ಎಚ್. & ಸುಮಿತ್ರಾಬಾಯಿ ಬಿ. ಎನ್. (ಸಂ). (2006) ಸುವರ್ಣ ಸಾಹಿತ್ಯ ವಿಮರ್ಶೆ. ಕರ್ನಾಟಕ ಸಾಹಿತ್ಯ ಅಕಾಡಮಿ. ಬೆಂಗಳೂರು.
3. ಬೋರಲಿಂಗಯ್ಯ ಹಿ. ಚಿ. (ಸಂ). (2014). ಕುವೆಂಪು ಮಹಿಳಾ ಮಂಥನ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.